**ಸಾಕ್ಷಿಯನ್ನು ದಿನಾಂಕಃ 30-10-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ.ಎನ.ಎನ್ ವಕೀಲರವರಿಂದಃ**

1. ಪ್ರತಿವಾದಿಯು ಪ್ರತಿವಾದ ಪತ್ರದೊಂದಿಗೆ ಹಾಕಿರುವ ಕಚ್ಚಾ ನಾಕಾಶೆಯನ್ನು ನೋಡಿದ್ದೇನೆ ಮತ್ತು ಆ ಬಗ್ಗೆ ತಿಳಿದುಕೊಂಡಿದ್ದೇನೆ. ದಾವಾ ಅಸ್ತಿ ಪೂರ್ವ ಪಶ್ಚಿಮ 35 ಅಡಿ ಮತ್ತು ಉತ್ತರ ದಕ್ಷಿಣ 36 ಅಡಿ ವಿಸ್ತೀರ್ಣ ಇರುವುದು. ನನ್ನ ತಂದೆ ಇದೇ ಪ್ರತಿವಾದಿಯ ವಿರುದ್ಧ ಡೋರ ನಂ 49 ಕ್ಕೆ ಸಂಬಂದಿಸಿದಂತೆ OS No. 180/1992 ರಂತೆ ದಾವೆಯನ್ನು ಹಾಕಿದ್ದರು ಅಂದರೆ ಸರಿ. ನನ್ನ ತಂದೆ ಆ ಕೇಸಿನಲ್ಲಿ ಡೊರ ನಂ 47/ಎ ಇದರ ಚೆಕ್ಕು ಬಂದಿಗಳನ್ನು ಬರೆಸಿರುವುದು ಸರಿ ಇರುತ್ತದೆ.

2. ಸದರಿ ಕೇಸಿನ ವಾದ ಪತ್ರದಲ್ಲಿ ಡೊರೇ ನಂ 47/ಎ ಇದರ ಪಶ್ಚಿಮಕ್ಕೆ ಕುರುಬರ ಮಗ್ಗಗಳಿಗೆ ಹೋಗುವ ದಾರಿ ಎಂದು ನನ್ನ ತಂದೆ ಬರೆಸಿರುವರು ಅಂದರೆ ಸರಿ. ಊರಿಯ ಹಿರಿಯರ ಮಾರ್ಗದರ್ಶಿನದ ಮೂಲಕ ನನ್ನ ತಂದೆ OS No. 180/1992 ನ್ನು ರಾಜಿ ಮಾಡಿಕೊಂಡರು ಅಂದರೆ ಸರಿ. ವಾದ ಪತ್ರದೊಂದಿಗೆ ಸಲ್ಲಿಸಿರುವ ಕಚ್ಚಾ ನಕಾಶೆಯಲ್ಲಿ ಕಾಣಿಸಿರುವ Q S C A ಈ ಭಾಗವು ನಮಗೆ ಸೇರಿದೆ ಎಂದು ತೋರಿಸಲು ನಾನು ಡಿಸಿಬಿ ರಿಜಿಸ್ಟರನ್ನು ಹಾಜರು ಪಡಿಸಿದ್ದೇನೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದ ಪತ್ರದೊಂದಿಗೆ ಸಲ್ಲಿಸಿರುವ ನಕಾಶೆಯಲ್ಲಿ ಕಂಡು ಬರುವ A B C D E F ನಲ್ಲಿ ಕಾಣಿಸಿರುವ ಡೊರ ನಂಬರುಗಳು ಪ್ರತಿವಾದಿಯರಿಗೆ ಸೇರಿದ್ದು ಅಂದರ ಸರಿ.

**ಸಾಕ್ಷಿಯ ಸಹಿ** **30.10.2025**

3. ನಮ್ಮ ಮನೆಯ ಉತ್ತರ ದಿಕ್ಕಿಗೆ ಪ್ರತಿವಾದಿಯ ಸಹೋದರನಾದ ಬಸವರಾಜಪ್ಪನ ಮನೆ ಇದೆ ಅಂದರೆ ಸರಿ. ಸದರಿ ನಕಾಶೆಯಲ್ಲಿ ಕಾಣಿಸಿರುವ I J K L ಭಾಗವು ನನಗೆ ಸೇರಿದ್ದು ಅಂದರೆ ಸರಿ. ಈಗಲೂ ಅದು ನನ್ನ ತಂದೆಯ ಹೆಸರಿನಲ್ಲಿ ಖಾತೆ ಇದೆ ಅಂದರೆ ಸರಿ. ಡೊರ ನಂ 47 ಎ ಮನೆ ಸುಮಾರು 20-25 ವರ್ಷಗಳ ಹಿಂದೆ ಬಿದ್ದು ಹೋಗಿತ್ತು ಅಂದರೆ ನನಗೆ ಗೊತ್ತಿಲ್ಲ. ನಾನು ಈಗ ಅ ಮನೆಯಲ್ಲಿ ವಾಸವಿಲ್ಲ ಅಂದರೆ ಸರಿ. ಆ ಮನೆಯನ್ನು ಈ ವರೆಗೂ ನಾನಾಗಲೀ ನನ್ನ ತಂದೆಯಾಗಲೀ ಪುರ್ನನಿರ್ಮಾಣ ಮಾಡಲು ಪ್ರಯತ್ನಿಸಿರುವುದಿಲ್ಲ ಅಂದರೆ ಸರಿ.

4. ದಿನಾಂಕ 30.08.2001 ರಂದು ಡೊರ ನಂ 51 ನ್ನು ಪ್ರತಿವಾದಿಯು ಖರೀದಿ ಮಾಡುವ ಕಾಲಕ್ಕೆ ಅದು ಖಾಲಿ ಜಾಗ ಆಗಿತ್ತು ಅಂದರೆ ಸರಿಯಲ್ಲ. ಪ್ರತಿವಾದಿಯ ಖರೀದಿ ಪತ್ರದಲ್ಲಿ ಪಶ್ಚಿಮದ ಶೆಡ್ಯೂಲಿನಲ್ಲಿ ಮಗ್ಗಕ್ಕೆ ಹೋಗುವ ದಾರಿ ಇದೆ ಎಂದು ಉಲ್ಲೇಕ ಇದೆ ಅಂದರೆ ಸರಿ. ವಾದ ಪತ್ರದೊಂದಿಗೆ ಸಲ್ಲಿಸಿರುವ ಕಚ್ಚಾ ನಾಕಶೆಯಲ್ಲಿ ಕಾಣಿಸಿರುವ Q S C A ಜಾಗವು ಮಗ್ಗಾಕ್ಕೆ ಹೋಗುವ ದಾರಿ ಅಂದರೆ ಸಾಕ್ಷಿಯು ಅದು ಮಗ್ಗಾಕ್ಕೆ ಹೋಗುವ ದಾರಿಯೂ ಹೌದು ಮತ್ತು ನಮ್ಮ ಮನೆಯ ಮೇಲಿನ ನೀರು ಬೀಳುವ ಜಾಗವೂ ಹೌದು ಎಂದು ನುಡಿದರು.

5. OS No. 183/1992 ರ ವಾದ ಪತ್ರದ ಶೊಡ್ಯೂಲಿನಲ್ಲಿ ನನ್ನ ತಂದೆ ನೀರು ಬೀಳುವ ಜಾಗ ಎಂದು ತೋರಿಸಿರುವುದಿಲ್ಲ ಅಂದರೆ ಸರಿ. ಅದು ನಮ್ಮ ಮನೆಯ ನೀರು ಬೀಳುವ ಜಾಗ ಅಲ್ಲದೇ ಇರುವ ಕಾಣರ ನಮ್ಮ ತಂದೆ ಅದನ್ನು ಆ ಕೇಸಿನ ಶೆಡ್ಯೂಲಿನಲ್ಲಿ ಕಾಣಿಸಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರ ಕೊಡುವ ಉದ್ದೇಶದಿಂದ ಅದು ನಮ್ಮ ಮನೆಯ ನೀರು ಬೀಳುವ ಜಾಗ ಎಂದು ಹೊಸದಾಗಿ ಸೃಷ್ಟಿಸಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಸಾಕ್ಷಿಯ ಸಹಿ 30.10.2025

6. ಖರೀದಿ ಪತ್ರದ ಅಧಾರದ ಮೇಲೆ ಪ್ರತಿವಾದಿಯ ಹೆಸರಿಗೆ ಖಾತಾ ಆಗಿದೆ ಅಂದರೆ ಸರಿ. ಆ ವಿಚಾರ ನನಗೆ ಗೊತ್ತಿತ್ತು ಅಂದರೆ ಸರಿ. ಡೊರ ನಂ 51 ಕ್ಕೆ ಸಂಬಂದಿಸಿದ ಡಿಸಿಬಿ ರಿಜಿಸ್ಟರ್ / ಖಾತಾದಲ್ಲಿ ಡೊರ ನಂ 51 ರ ಪಶ್ಚಿಮಕ್ಕೆ ಕುರುಬರ ಮಗ್ಗಕ್ಕೆ ಹೋಗುವ ದಾರಿ ಎಂದು ಉಲ್ಲೇಕಿಸಲಾಗಿದೆ ಅಂದರೆ ಸರಿಯಲ್ಲ. ಆ ಬಗ್ಗೆ ನಾನು ಪ್ರಶ್ನೆ ಮಾಡಿರುವುದಿಲ್ಲ ಅಂದರೆ ಸುಳ್ಳು. ಪ್ರತಿವಾದಿ ಮನೆ ಕಟ್ಟುವ ಸಮಯದಲ್ಲಿ ಯಾವುದೇ ಒತ್ತುವರಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯು ದಕ್ಷಿಣ ದಿಕ್ಕಿಗೆ ಸುಮಾರು 5-6 ಅಡಿ ಮತ್ತು ಪಶ್ಚಿಮ ದಿಕ್ಕಿಗೆ ಸುಮಾರು 3 ಅಡಿಗಳಷ್ಟು ಒತ್ತುವರಿಯನ್ನು ಮಾಡಿರುವರು. ಸದರಿ ಒತ್ತುವರಿ ಅಳತೆಗಳನ್ನು ನಾನು ವಾದ ಪತ್ರದಲ್ಲಿ ಬರೆಸಿರುವುದಿಲ್ಲ ಅಂದರೆ ಸರಿಯಲ್ಲ.

7. ವಾದ ಪತ್ರದ ಕಚ್ಚಾ ನಾಕಶೆಯಲ್ಲ ಕಾಣಿಸಿರುವ Q S C A ಜಾಗದಲ್ಲಿ ಪಂಚಾಯತಿವರು ಚಪ್ಪಡಿ ಕಲ್ಲು ಹಾಕಿ ನೀರು ಹೋಗಲು ಮತ್ತು ಓಡಾಡಲು ವ್ಯವಸ್ತೆ ಮಾಡಿದ್ದರು ಅಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಪೊಟೋದಲ್ಲಿ ಪಂಚಾಯತಿಯವರು ಹಾಕಿರುವ ಚಪ್ಪಡಿ ಕಲ್ಲು ಕಾಣುತ್ತದೆ ಅಂದರೆ ಅದು ನಾವು ಹಾಕಿರುವುದು ಇರುತ್ತದೆ. ಆ ರೀತಿ ನಾನು ಹಾಕಿರುವ ಚಪ್ಪಡಿ ಕಲ್ಲು ಎಂದು ಸುಳ್ಳು ಹೇಳುತ್ತಿದ್ದೇನ ಅಂದರೆ ಸರಿಯಲ್ಲ. ಚಪ್ಪಡಿ ಕಲ್ಲನ್ನು ನಾನು ಹಾಕಿದ್ದೇನೆ ಎಂದು ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ.

8. ಈಗ ಅ ಸ್ಥಳದಲ್ಲಿ ಗ್ರಾಮ ಪಂಚಾಯತಿವರು ಚಪ್ಪಡಿ ಕಲ್ಲನ್ನು ತೆಗೆದು ಕಾಂಕ್ರೀಟ್ ರಸ್ತೆ ಮಾಡಿರುವರು ಅಂದರೆ ಸರಿಯಲ್ಲ. ಸದರಿ ರಸ್ತೆಯು ದಕ್ಷಿಣದ ಕೆಡೆಯಿಂದ ಪ್ರತಿವಾದಿಯ ಮನೆಯ ವರೆಗೆ ಹೋಗುತ್ತದೆ ಅಂದರೆ ಸರಿಯಲ್ಲ ಮತ್ತು ಪ್ರತಿವಾದಿಯ ಮನೆಯ ವರೆಗೂ ಪಂಚಾಯತಿವರು ಕಾಂಕ್ರೀಟು ಮಾಡಿರುವರು ಅಂದರೆ ಸರಿಯಲ್ಲ. ಕೇಸಿನ ವಾಸವಾಂಶವನ್ನು

ತಿಳಿದುಕೂಳ್ಳಲು ನ್ಯಾಯಾಲಯದ ಅಯುಕ್ತರನ್ನು ನೇಮಕ ಮಾಡಿ ವರದಿ ತರಿಸಿಕೊಳ್ಳಲು ನನಗೆ ತಕರಾರು ಇರುವುದಿಲ್ಲ. ನಾನು ವಾಸ್ತವಾಂಶಕ್ಕೆ ವ್ಯತಿರಿಕ್ತವಾಗಿರುವ ಕಚ್ಚಾ ನಕಾಶೆಯನ್ನು ವಾದ ಪತ್ರದೊಂದಿಗೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

9. ನನಗೆ ನನ್ನ ತಂದೆ ಹಾಕಿದ್ದ OS No. 180/1992 ರ ದಾವೆಯ ಕುರಿತು ಮಾಹಿತಿ ಇರುತ್ತದೆ. ಆ ಕೇಸಿನಲ್ಲಿ ನ್ಯಾಯಾಲಯದ ಅಯುಕ್ತರನ್ನು ನೇಮಿಸಿ ವರದಿಯನ್ನು ಪಡೆದುಕೊಳ್ಳಲಾಗಿತ್ತು ಅಂದರೆ ಸರಿಯಲ್ಲ.ಆ ವರದಿಯಲ್ಲಿ ದಾವಾ ಅ್ತಿಯ ಪೂರ್ವ ದಿಕ್ಕಿಗೆ ಕುರುಬರ ಮಗ್ಗಕ್ಕೆ ಹೋಗುವ 4.6 ಅಡಿ ಅಷ್ಟು ಅಗಲದ ದಾರಿ ಇದೆ ಎಂದು ಉಲ್ಲೇಕ ಇದೆ ಅಂದರೆ ಸರಿಯಲ್ಲ. ನನ್ನ ತಂದೆ ಸದರಿ ದಾವೆಯಲ್ಲಿ ಒಂದು ಕಚ್ಚಾ ನಕಾಶೆಯನ್ನೂ ಕೂಡ ಸಲ್ಲಿಸಿದ್ದರು ಅಂದರೆ ನನಗೆ ಗೊತ್ತಿಲ್ಲ. ಆ ಕಚ್ಚಾ ನಕಾಶೆಯಲ್ಲಿ ನಮ್ಮ ಮನೆಯ ಪೂರ್ವ ದಿಕ್ಕಿಗೆ ಜಾಗ ಎಂದು ನನ್ನ ತಂದೆ ಕಾಣಿಸಿರುವುದಿಲ್ಲ ಅಂದರೆ ಸರಿಯಲ್ಲ.

10. ನಾನು ಈ ಕೇಸಿನ ವಾದ ಪತ್ರದಲ್ಲಿ ದಾವಾ ಅಸ್ತಿಯ ಪೂರ್ವ ದಿಕ್ಕಿಗೆ ಕಾಲು ದಾರಿ ಇದೆ ಎಂದು ಕಾಣಿಸಿದ್ದೇನೆ ಅಂದರೆ ಸರಿ. ಅದು ನಮ್ಮ ಖಾಸಗಿ ದಾರಿ ಆಗಿರುವುದಿಲ್ಲ ಮತುತ ಕುರುಬರ ಮಗ್ಗಕ್ಕೆ ಹೋಗುವ ಸಾರ್ವಜನಿಕರ ದಾರಿ ಆಗಿರುತ್ತದೆ ಅಂದರೆ ಸರಿಯಲ್ಲ. ನಾನು ಈ ಕೇಸಿನ ವಾದ ಪತ್ರದಲ್ಲಿ ಪ್ರತಿವದಿಾಯ ಮನೆಯ ದಕ್ಷಿಣ ದಿಕ್ಕಿಗೆ ಸಾರ್ವಜನಿಕ ದಾರಿ ಎಂದು ತೋರಿಸಿದ್ದೇನೆ ಅಂದರೆ ಸರಿ. ಅದೇ ಸಾರ್ವಜನಿಕರ ದಾರಿಯು ಪ್ರತಿವಾದಿಯ ಮನೆಯ ಪಶ್ಚಿಮ ದಿಕ್ಕಿಗೆ ಮುಂದುವರೆದಿರುತ್ತದೆ ಅಂದರೆ ಸರಿಯಲ್ಲ.

11. ಸದರಿ ದಾರಿಯು ಪ್ರತಿವಾದಿಯ ಮನೆಯ ದಕ್ಷಿಣ ದಿಕ್ಕಿನಿಂದ ಕುರುಬರ ಮಗ್ಗದ ವರೆಗೂ ಹೋಗುತ್ತದೆ ಅಂದರೆ ಸರಿಯಲ್ಲ. ನನ್ನ ತಂದೆ ಪ್ರತಿವಾದಿಯ ವಿರುದ್ಧ OS No. 180/1992 ಮತ್ತು OS No. 29/1992 ದಾವೆಗಳನ್ನು ಸಲ್ಲಿಸಿದ್ದರು ಅಂದರೆ ಸರಿ. ಸದರಿ ಎರಡೂ ದಾವೆಗಳು ಡೊರ ನಂ 47 ಎ ಅಂದರೆ ನಮ್ಮ ಮನೆಗೆ ಸಂಬಂದಿಸಿದಂತೆಯೇ ಸಲ್ಲಿಸಿದ್ದರು ಅಂದರೆ ಸರಿ.

12. ನನ್ನ ತಂದೆ ಅಂಡಿ ಮಲ್ಲಪ್ಪನ ವಿರುದ್ಧ OS NO. 194/1996 ರಂತೆ ಒಂದು ದಾವೆಯನ್ನು ಸಲ್ಲಿಸಿದ್ದರು ಅಂದರೆ ಸರಿ. ನನ್ನ ತಂದೆ OS No. 191/1996 ರಂತೆ ಭರಮಪ್ಪನ ವಿರುದ್ಧ ದಾವೆ ಸಲ್ಲಿಸಿದ್ದರು ಅಂದರೆ ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯಕ್ಕೆ ಈ ದಾವೆ ಸೇರಿದಂತೆ ಒಟ್ಟು 3 ಕೇಸುಗಳಲ್ಲಿ ಹಾಜರಾಗುತ್ತಿದ್ದೇನೆ.ನನ್ನ ತಂದೆ OS No. 235/2011 ನ್ನು ಸಲ್ಲಿಸಿದ್ದ ವರು ಮೃತ ಪಟ್ಟ ನಂತರ ನಾನು ಆ ಕೇಸನ್ನು ನಡೆಸುತ್ತಿದ್ದೇನ ಅಂದರೆ ಸರಿ. ಪ್ರತಿವಾದಿಗೆ ತೊಂದರೆ ಕೊಡಲು ನಾನು ಈ ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**30-10-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** **30.10.2025**